## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು ನಗರ ಜಿಲ್ಲೆ

## ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮ ದರ್ಜೆ ಕಾಲೇಜು

#೧೨ ಅಣ್ಣಾಸ್ವಾಮಿ ಮೊದಲಿಯಾರ್‌ರೋಡ್, ಬೆಂಗಳೂರು

## "ಡಾ. ಬಿ.ಆರ್.ಅಂಬೇಡ್ಕರ್ ಓದು"

## ವಿಶೇಷ ಉಪನ್ಯಾಸ ಹಾಗೂ ಬಹುಮಾನ ವಿತರಣಾ ಸಮಾರಂಭದ ವರದಿ

ದಿನಾಂಕ ೦೯/೧೧/೨೦೨೨ ಬುಧವಾರ ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಹಾಗೂ ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮ ದರ್ಜೆ ಕಾಲೇಜು, ಬೆಂಗಳೂರು ಸಂಯೋಗದಲ್ಲಿ "ಡಾ. ಬಿ.ಆರ್.ಅಂಬೇಡ್ಕರ್ ಓದು" ಎಂಬ ವಿಶೇಷ ಉಪನ್ಯಾಸ ಹಾಗೂ ಬಹುಮಾನ ವಿತರಣಾ ಸಮಾರಂಭ ಆಯೋಜಿಸಲಾಗಿತ್ತು. ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ನಡೆದ ಈ ಕಾಯಕ್ರಮಕ್ಕೆ ಸು.೩೦೦ ವಿದ್ಯಾರ್ಥಿಗಳು, ಬೋಧಕರು ಮತ್ತು ಬೋಧಕೇತರರು ಹಾಜರಾಗಿದ್ದರು.

ಸು. ೧೧:೦೦ ಗಂಟೆಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಶ್ರೀಮತಿ. ಬಿ.ನೀಲಮ್ಮ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಮುಖ್ಯ ಅತಿಥಿಗಳಾಗಿ ಶ್ರೀ. ಅರವಿಂದನರಾಯನ್, ಕಾರ್ಯದರ್ಶಿಗಳು, ಆರ್.ಬಿ.ಎ.ಎನ್.ಎಂ.ಎಸ್ಶಿಕ್ಷಣ ದತ್ತಿ ಸಂಸ್ಥೆ. ಹಾಗೂ ಡಾ. ವೀರಭದ್ರಪ್ಪ.ಎಚ್, ಆಡಳಿತಾಧಿಕಾರಿಗಳು, (ಕಾಲೇಜು) ಆರ್.ಬಿ.ಎ.ಎನ್.ಎಂ.ಎಸ್ಶಿಕ್ಷಣ ದತ್ತಿ ಸಂಸ್ಥೆ, ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ನಾರಾಯಣ್‌ಕ್ಯಾಸಂಬಳ್ಳಿ, ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಬೆಂ.ನ.ವಿ.ವಿ, ಕಾರ್ಯಕ್ರಮದ ಅಧ್ಯಕ್ಷರಾಗಿ ಡಾ.ಪ್ರತಾಪ್, ಪ್ರಾಚಾರ್ಯರು, ಆರ್.ಬಿ.ಎ.ಎನ್.ಎಂ.ಎಸ್ ಪ್ರಥಮ ದರ್ಜೆ ಕಾಲೇಜು, ಸತೀಶ್.ಎಚ್,ಆಡಳಿತಾಧಿಕಾರಿಗಳು (ಶಾಲೆ) ಆರ್.ಬಿ.ಎ.ಎನ್.ಎಂ.ಎಸ್ಶಿಕ್ಷಣ ದತ್ತಿ ಸಂಸ್ಥೆ, ಶ್ರೀಮತಿ.ಎ.ಅಮುದಾ, ಪ್ರಾಚಾರ್ಯರು, ಆರ್.ಬಿ.ಎ.ಎನ್.ಎಂ.ಎಸ್ ಪದವಿಪೂರ್ವ ಕಾಲೇಜು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಪ್ರಾರ್ಥನೆಯ ಮೂಲಕ ಪ್ರಾರಂಭವಾದ ಕಾರ್ಯಕ್ರಮವು ಡಾ.ಅವಿನಾಶ್ ರವರಿಂದ ಅತಿಥಿಗಳಿಗೆ ಸ್ವಾಗತ, ಗಣ್ಯರಿಂದ ದೀಪ ಬೆಳಗಿಸುವುದರ ಮೂಲಕ ಉದ್ಘಾಟನೆಯ ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಬಿ.ನೀಲಮ್ಮರವರು "ಬಸವಣ್ಣ, ಅಂಬೇಡ್ಕರ್, ಬುದ್ಧ, ಗಾಂಧಿ ಇವರ ಜೀವನಸಾಧನೆ ವಿದ್ಯಾರ್ಥಿಗಳ ಜೀವನಕ್ಕಲೆ ಸ್ಪೂರ್ತಿಯಾಗಬೇಕು ಎಂಬುದು ಕಾರ್ಯಕ್ರಮದ ಉದ್ದೇಶ" ಎಂದು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾದ ಡಾ.ನಾರಾಯಣ್‌ಕ್ಯಾಸಂಬಳ್ಳಿರವರು " ಕನಸುಗಳ ಕಡೆದವನೆ" ಎಂದು ಸುಶ್ರಾವ್ಯವಾಗಿ ಹಾಡಿ ವಿದ್ಯಾರ್ಥಿಗಳ ಲಕ್ಷ್ಯವನ್ನು ತಮ್ಮೆಡೆಗೆ ಸೆಳೆಯುವುದರ ಮೂಲಕ " ಮುಚ್ಚಲ್ಪಟ್ಟ ಸಮಾಜಕ್ಕೆ ಅಂಬೇಡ್ಕರ್ ರವರು ವೈದ್ಯರಾಗಿ ಕಂಡ ಕನಸುಗಳು – ಸಂವಿಧಾನ ರಚನೆ, ಭೂ ರಾಷ್ಟ್ರೀಕರಣ, ಶಿಕ್ಷಣದ ರಾಷ್ಟ್ರೀಕರಣ, ಮಹಿಳೆಯರಿಗೆ ಪ್ರಾತಿನಿಧ್ಯತೆ. ಈ ಕನಸುಗಳು ಸಾಕಾರವಾಗಲು ಇದ್ದ ತೊಡಕುಗಳು ಹಾಗೂ ಅಂಬೇಡ್ಕರವರ ವಸ್ತುನಿಷ್ಠ ಅಧ್ಯಯನದ ಅಗತ್ಯತೆ" ಕುರಿತು ಕೂಲಂಕುಶವಾಗಿ ಉಪನ್ಯಾಸ ನೀಡಿದರು.

ದಿನಾಂಕ:೦೫/೧೧/೨೦೨೨ ರಂದು ಕಾಲೇಜಿನಲ್ಲಿ "ಡಾ. ಬಿ.ಆರ್.ಅಂಬೇಡ್ಕರ್ ಓದು" ಕಾರ್ಯಕ್ರಮದ ಅಂಗವಾಗಿ ನಡೆದ ಪ್ರಬಂಧಸ್ಪರ್ಧೆ, ಚರ್ಚಾಸ್ಪರ್ಧೆ, ರೇಖಾಚಿತ್ರ ಸ್ಪರ್ಧೆ ವಿಜೇತರಿಗೆ ಗಣ್ಯರು ಬಹುಮಾನ ವಿತರಿಸಿದರು. ನಂತರ ಮುಖ್ಯ ಅತಿಥಿಗಳಾದ ಶ್ರೀ. ಅರವಿಂದನರಾಯನ್‌ರವರು "ಅಂಬೇಡ್ಕರ್ ರವರನ್ನು ಪ್ರೇರಣೆಗಾಗಿ ಓದಬೇಕು ಸಮಾಜದಲ್ಲಿ, 'ಗಣನೆ' ಪದ ಮುಖ್ಯವಾದುದು" ಎಂದು ಒಂದೆರೆಡು ಮಾತಾಡಿದರು. ಡಾ. ವೀರಭದ್ರಪ್ಪನವರು "ಅಂಬೇಡ್ಕರ್ ರವರ ಸಮಗ್ರ ಹೋರಾಟ ತಿಳಿಯಲು ತೆರದ ಮನಸ್ಸಿನ ಅಧ್ಯಯನ ಮುಖ್ಯ" ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆರ್.ಬಿ.ಎ.ಎನ್.ಎಂ.ಎಸ್. ಪ್ರ.ದ.ಕಾಲೇಜಿನ ಗ್ರಂಥಾಲಯಕ್ಕೆ 'ಅಂಬೇಡ್ಕರ್ ಸಂಪುಟಗಳು ಮತ್ತು ವಚನ ಸಂಗ್ರಹ' ಪುಸ್ತಕಗಳನ್ನು ಸಮರ್ಪಿಸಿದರು. ನಂತರ ಅಧ್ಯಕ್ಷ ಭಾಷಣವನ್ನು ಮಾಡಿದ ಕಾಲೇಜಿನ ಪ್ರಾಚಾರ್ಯರಾದ ಡಾ. ಪ್ರತಾಪ್ ರವರು"ಪ್ರತಿಯೊಬ್ಬ ವಿದ್ಯಾರ್ಥಿ ತಮ್ಮ ಸ್ವಂತಪ್ರತಿಭೆಯ ಮೂಲಕ ಅಂಬೇಡ್ಕರ್, ಗಾಂಧಿಯಂತಹ ಮಹಾಪುರುಷರಾಗಿ ಬೆಳೆಯಬೇಕು" ಆಶಿಸಿ ಅಂಬೇಡ್ಕರ್ ಕುರಿತು ಅರ್ಥಪೂರ್ಣ ಮಾತುಗಳನ್ನಾಡಿದರು. ವಂದನಾರ್ಪಣೆಯ ನಂತರ ಸಾಮೂಹಿಕವಾಗಿ ನಾಡಗೀತೆ ಹಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿತವಾದ ಜನಪದಕಲೆ ವೀರಗಾಸೆ ಶ್ರೀ ಮಲ್ಲೇಶ್ವರಸ್ವಾಮಿ ಮತ್ತು ತಂಡದವರು ಪ್ರದರ್ಶಿಸಿದರು.

ಮುಟ್ಟಿಸಿಕೊಳ್ಳದವನಾಗಿ ಹುಟ್ಟಿ ಅಪ್ಪಿಕೊಳ್ಳುವಂಥವನಾಗಿ, ಸಮಾನತೆಗೆ ಹೋರಾಡಿದ ಅಸಾಮಾನ್ಯನಾದ ಅಂಬೇಡ್ಕರ್ ಕುರಿತ ಈ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

ಪ್ರಾಚಾರ್ಯರು